ನಾಚಿಕೆ ಆಗುತ್ತದೆ ಅಲ್ಲವೇ?' ಎಂದ.ಮುನಿದಿದ್ದ ಮಗನಿಂದ ಉತ್ತರ ಬರುವ ಮೊದಲೇ ಮುದುಕ ಅಡುಗೆ ಮನೆಯ ಕಡೆ ನಡೆದ.

ಮನೆಯ ಸಂದಿಗ್ಧತೆಗಳು ಮಗನನ್ನು ಕಾಡುತ್ತಿಲ್ಲ ಎನ್ನುವುದು ಅವನ ಮಾತುಗಳಿಂದ ಸ್ಪಷ್ಟವಾಗಿತ್ತು. ಮಗನ ನಿರಾಶೆ ಅವನ ಊಹೆಗೆ ಬರುತ್ತಿತ್ತು. ಆದರೆ ಹುಡುಗ ಎಂತಹದೋ ಒಂದು ಕೆಲಸ ಸಿಕ್ಕಿದ ಮೇಲೆ ತನ್ನೊಳಗಿನ ತಿರಸ್ಕಾರವನ್ನು ಹೊರಹಾಕಬಹುದಿತ್ತಲ್ಲ? ನಿರುದ್ಯೋಗಿಯಾಗಿರುವ ತನಕ ಇನ್ನೊಬ್ಬರ ಸಹಾಯ ಪಡೆಯುವುದರಲ್ಲಿ ತಪ್ಪಿಲ್ಲ. ಸರಕಾರವನ್ನು ಬಯ್ಯುತ್ತ ಕೂರುವುದರಲ್ಲಿ ಅರ್ಥ ಇಲ್ಲ. ಮಗನ ಪ್ರತಿಭೆಗೆ ತಕ್ಕ ಕೆಲಸ ನೀಡಲಾಗದಿದ್ದುದು ಸರಕಾರದ ದೌರ್ಬಲ್ಯ, ವೈಫಲ್ಯ ಎಂದು ಒಪ್ಪುತ್ತಿದ್ದ. ಆದರೆ ಅಲ್ಲಿಯತನಕ ಮಗ ಒಂದು ಸಾಮಾನ್ಯ ಉದ್ಯೋಗ ಒಪ್ಪಿಕೊಳ್ಳುವುದರಲ್ಲಿ ತಪ್ಪೇನಿದೆ? ತಾನು ದರಿದ್ರ ಸಂಬಳದಲ್ಲಿ ಕೆಲಸ ಮಾಡಲಿಲ್ಲವೇ? ಅದರಿಂದ ತನ್ನ ಸಾಮರ್ಥ್ಯ ತಗ್ಗಿತೆ?

ಮಗ ಶಿಕ್ಷಣದಲ್ಲಿ ತನಗಿಂತ ಬಹಳ ಮುಂದೆ ಹೋಗಿದ್ದಾನೆ. ಆದರೆ ಸಂಸ್ಕೃತಿಯಲ್ಲಿ ಅಲ್ಲ. ಭೀಕರ ಸತ್ಯವನ್ನು ಒಪ್ಪಿಕೊಳ್ಳದೇ ಬೇರೆ ಮಾರ್ಗ ಇಲ್ಲ. ಮಗನ ತಿರಸ್ಕಾರವನ್ನು ಒಪ್ಪಿಕೊಳ್ಳುವುದು ಅವನದೇ ಅಪ್ಪನಿಗೆ ಅಸಾಧ್ಯವಾಗಿತ್ತು.

ಅಮ್ಮ ಮಸಾಲೆ ಅರೆಯುತ್ತಿದ್ದಳು. ಗಂಡನನ್ನು ನೋಡಿ ನಿಲ್ಲಿಸಿದಳು. 'ನಿಮ್ಮ ಮಗನ ಅಸಂಬದ್ಧ ಮಾತುಗಳನ್ನು ಕೇಳದಿರಲು ವರ್ಷಕ್ಕೆ ಎಷ್ಟು ಸೀರೆಗಳನ್ನು ನನಗೆ ತಂದು ಕೊಡಬಲ್ಲಿರಿ? ಕೊಡುವ ವಿಷಯ ಬಂದಾಗ ಯಾರೂ ಇಲ್ಲ. ಒರಟು ಮಾತನಾಡುವುದಾದರೆ ಎಲ್ಲರಿಗೂ ಆಗುತ್ತದೆ. ಎಂತಹ ವೈರತ್ವದ ಮಾತುಗಳು! ನಾನ್ಯಾಕೆ ಹರಕಲು, ಕೊಳೆಯಾದ ಸೀರೆ ಉಡುತ್ತೇನೆ? ನಿಮ್ಮ ಮಗನಿಗೆ ತಿಳಿಯಬೇಕಂತೆ! ನನ್ನ ಬಟ್ಟೆ ವಾಸನೆ ಬರುತ್ತದೆ. ಅವನಿಗೆ ಹೊಲಸು ಊಟ ಕೊಡುತ್ತೇನೆ' ಗಂಡನ ಮುಖ ನೋಡಿದಳು. ಕಣ್ಣಲ್ಲಿ ನೀರು ತುಂಬಿತ್ತು. 'ನನ್ನ ರಕ್ತ ದೇಹದಿಂದ ಹುಟ್ಟಿದವನಿಂದಲೇ ಎಷ್ಟು ನೋವಿನ ಮಾತುಗಳು! ತನ್ನಮ್ಮನ ಬಗ್ಗೆ ಸ್ವಲ್ಪವೂ ಆದರ ಇಲ್ಲ'.

ಗಂಡ ಮೌನವಾಗಿ ನಿಂತಿದ್ದ. ಘೋರ ಕ್ರೂರ ಸತ್ಯ ಅವನ ಎದೆಯನ್ನು ಹರಿತವಾದ ಚಾಕುವಿನಂತೆ ಇರಿದಿತ್ತು. ತಾನು ಬೆಳೆಸಿದ ಮಗ ತನ್ನಿಂದಲೇ



ದೂರಾಗುತ್ತಿದ್ದ. ತನ್ನ ನಿಲುವು ನಂಬಿಕೆಗಳು ಮಗನಿಗೆ ನಿರರ್ಥಕ ಇರಬಹುದು. ಆದರೆ ತನಗೆ ಮಹತ್ವದ್ದು. ಮಗನು ಪ್ರತಿಕ್ರಿಯಿಸಿದ ರೀತಿ ಅವನ ಜೀವನಮೌಲ್ಯ ತಂದೆಗೆ ಭಯ ಹುಟ್ಟಿಸಿತ್ತು. ಮಗ ತನ್ನ ಅಸ್ತಿತ್ವವನ್ನೇ ಅಲ್ಲಗಳೆಯುವ ಭವಿಷ್ಯದ ಬಗ್ಗೆ ಭಯ ಹುಟ್ಟಿಸಿತ್ತು. ಮಗ ಮನೆಯ ಎಲ್ಲರನ್ನೂ ನಿರ್ಲಕ್ಷಿಸಿ ತಂದೆಯ ಜೊತೆಗಿನ ಸಂಬಂಧಕ್ಕೆ ನಾಚಿಕೆಪಡಬಹುದು.

ವೃದ್ಧಾಪ್ಯದಲ್ಲಿ ಮಗನ ದುಡಿಮೆ ಅವಲಂಬಿಸಿ ಬದುಕಬೇಕು ಎಂದು ಬಯಸಿರಲಿಲ್ಲ. ಬಹುಶಃ ಅವನ